# ಸ್ವಿಸ್ ಪರ್ವತ ಶ್ರೇಣಿಯ ಮೇಲೆ..




**ಎಸ್. ಆರ್. ದೇವಪ್ರಕಾಶ್ ತುಮಕೂರು**

ಅಂತರರಾಷ್ಟ್ರೀಯ ರಾಜಕೀಯದಲ್ಲಿ ಸ್ವಿಝರ್ಲ್ಯಾಂಡ್ ತನ್ನದೇ ಸ್ಥಾನಮಾನಗಳನ್ನು ಹೊಂದಿದೆ. ಯುದ್ಧ ಹೂಡುತ್ತಿರುವ ರಾಷ್ಟ್ರಗಳ ಮಧ್ಯೆ ತಟಸ್ಥ ರಾಷ್ಟ್ರವಾಗಿರುವ ಅದರ ನಯನಮನೋಹರ ಹಾಗೂ ಫಲವತ್ತಾದ ನೆಲವು ಶಾಂತಿಪ್ರಿಯರಿಗೆ ಸದಾ ಮುದ ನೀಡುವ ಸ್ಥಳ. ಜಗತ್ತಿನ ಎಲ್ಲ ಜಂಜಡಗಳಿಂದ ಮುಕ್ತವಾಗಿ ಸುತ್ತಲು ಸ್ವಿಝರ್ಲ್ಯಾಂಡ್ ಹೇಳಿ ಮಾಡಿಸಿದ ದೇಶ.

ಪಿಲಾಟಸ್ ಪರ್ವತ ಶ್ರೇಣಿಯ ಮೇಲಕ್ಕೆ ಹೋಗುವ ಮುಂಚೆ ನಾವು ಇಳಿದುಕೊಂಡಿದ್ದ ಹೋಟೆಲ್‌ನವರು ಮಧ್ಯಾಹ್ನದ ಊಟವನ್ನು ಬುತ್ತಿಯಲ್ಲಿ ಕಟ್ಟಿಕೊಟ್ಟರು. ಅರ್ಧ ದಾರಿಯಲ್ಲಿ ರಸ್ತೆ ಬದಿಯಲ್ಲಿ ಕುಳಿತುಕೊಂಡು ಊಟ ಮುಗಿಸಿದೆವು. ಅಲ್ಲಿನ ಅತ್ಯುತ್ತಮ ರಸ್ತೆಗಳು ನಮಗೆ ಧೂಳುರಹಿತ ವಾತಾವರಣವನ್ನು ಊಟಕ್ಕೆಂದೇ ಕಲ್ಪಿಸಿದ್ದ ಹಾಗೆ ಅನಿಸಿತು!

2073 ಮೀಟರ್ ಎತ್ತರದ ಈ ಪರ್ವತಕ್ಕೆ ಮೇಲೆ ಹೋಗಲು ವಿಶೇಷ ಹಲ್ಲುಗಳ ಚಕ್ರವುಳ್ಳ ಟ್ರೈನ್ ಸಂಪರ್ಕವಿದೆ. ನಮ್ಮ ಉದಕಮಂಡಲದಲ್ಲಿಯೂ ಇಂತಹುದೇ ವ್ಯವಸ್ಥೆಯಿದೆ. ಇದು ಪ್ರಪಂಚದಲ್ಲಿಯೇ ಅತ್ಯಂತ ಕಡಿದಾದ ಇಳಿಜಾರಿನ ಮಾರ್ಗ. ಮೇಲೇರುತ್ತಾ ಹೋದಂತೆ ಸುಮಾರು 70 ಶಿಖರಗಳು ಮತ್ತು ಐದು ಸರೋವರಗಳ ವಿಸ್ತೃತ ದರ್ಶನದ ಆಹ್ಲಾದಕರ ಅನುಭವ!

ಟಿಟ್ಲಿಸ್ ಪರ್ವತದ ಮೇಲಕ್ಕೆ ಹೋಗಲು ನಿಧಾನವಾಗಿ ಸುತ್ತಲೂ (360 ಡಿಗ್ರಿ) ತಿರುಗುವ ದೊಡ್ಡ ಕೇಬಲ್ ಕಾರಿಗೆ ತಲುಪಬೇಕು. ಅದಕ್ಕೆ ಸಣ್ಣ ರೋಪ್ ವೇ ಕಾರಿನಲ್ಲಿ ಹೋಗಬೇಕಿತ್ತು. ಈ ಕಾರುಗಳ ಮೇಲೆ ಅನೇಕ ರಾಷ್ಟ್ರಗಳ ಧ್ವಜಗಳನ್ನು ಚಿತ್ರಿಸಿದ್ದರು. ನಮಗೆ ಸಿಕ್ಕಿದ್ದು ಪಾಕಿಸ್ತಾನ ಬಾವುಟದ ಕಾರ್!

ಮೇಲಕ್ಕೆ ಹೋಗುತ್ತಿರುವಾಗ ಹಸುಗಳ ಸಗಣಿಯ ವಾಸನೆ ಮೂಗಿಗೆ ಬಡಿಯಿತು. ಇದು ಪಾಶ್ಚಿಮಾತ್ಯ ದೇಶಗಳಲ್ಲಿ ಅಪರೂಪದ ಅನುಭವ! ನೋಡಿದರೆ ಕೆಲವು ಹಸುಗಳು ಮೇಯುತ್ತಿದ್ದ ದೃಶ್ಯ ಕಂಡಿತು.

ಸುಮಾರು 3020 ಮೀಟರ್ ಎತ್ತರದ ಈ ಪರ್ವತದ ತುದಿ ತಲುಪಲು ಐದು ನಿಮಿಷದ ಪ್ರಯಾಣ. ದೊಡ್ಡ ಕಾರಿನಲ್ಲಿ ಹತ್ತಿದಾಗ ಇಸ್ರೇಲ್ ದೇಶದ ಕೆಲವು ಯೆಹೂದ್ಯರು ನಮ್ಮೊಂದಿಗೆ ಸೇರಿದರು. ಅವರು ನಮಗೆ ಹಿಂದಿಯಲ್ಲಿ ವಂದಿಸಿದ್ದೇ ಅಲ್ಲದೆ, ಒಂದು ಹಳೆಯ ಹಿಂದಿ ಸಿನಿಮಾ ಹಾಡನ್ನು ಸ್ವಲ್ಪ ಹಾಡಿ ಆಶ್ಚರ್ಯಪಡಿಸಿದರು. ಅನೇಕ ಯೆಹೂದ್ಯರು ಹಿಂದೂ ಧರ್ಮ ಮತ್ತು ಯೋಗಕ್ಕೆ ಆಕರ್ಷಿತರಾಗಿ ಭಾರತಕ್ಕೆ ಬರುತ್ತಾರೆಂದು ಅವರು ಹೇಳಿದರು. ನಾವು ಕೆಳಕ್ಕೆ ಇಳಿದು ಬಂದ ಬಳಿಕ ಅಲ್ಲೂ ಒಂದು ಅಂಗಡಿಯಲ್ಲಿ ಭಾರತೀಯರು ಹಿಂದಿ ಮಾತನಾಡುತ್ತಾ ನಮ್ಮ ದೇಶದ ತಿನಿಸುಗಳನ್ನು ಬಿಸಿಬಿಸಿಯಾಗಿ ತಯಾರುಮಾಡಿ ಮಾರುತ್ತಿದ್ದುದು ಕಾಣಿಸಿತು.

ಯುದ್ಧಪೀಡಿತ ಪ್ರಪಂಚದಲ್ಲಿ ಸಾಮರಸ್ಯದ ಜೀವನ ಮತ್ತು ಶಾಂತಿಯುತ ಬಾಳ್ವೆ ಸಾಧ್ಯವೆಂದು ಸ್ವಿಝರ್ಲ್ಯಾಂಡ್ ಜಗತ್ತಿಗೆ ಸಾರುತ್ತಿದೆ. ಇಲ್ಲಿ ಮುಖ್ಯವಾಗಿ ಜರ್ಮನ್‌ರು, ಇಟಲಿಯವರು ಮತ್ತು ಫ್ರೆಂಚರು ಒಗ್ಗೂಡಿ ಒಂದೇ ರಾಷ್ಟ್ರದವರಾಗಿದ್ದಾರೆ. ಶಾಂತಿ ಮಾರ್ಗದಿಂದ ದೇಶವೊಂದು ಅಭಿವೃದ್ಧಿ ಹೊಂದಬಹುದು ಎಂದು ಜಗತ್ತಿಗೆ ರುಜುವಾತು ಮಾಡುತ್ತಿದೆ ಈ ದೇಶ.